**ದಿನಾಂಕಃ 29/10/2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**
**ಮುಂದುವರದ ಪಾಟೀ ಸವಾಲು: 1 ನೇ ಪ್ರತಿವಾದಿ ಪರ ಶ್ರೀ. ಹೆಚ್ ಎ ವಕೀಲರಿಂದಃ**

11. ನನ್ನ ತಾಯಿ ಮಸ್ತನಿಬೇಗಂ ರವರ ಪತಿ ಅಬ್ಬಾಸ್ ಆಲಿಯವರು ನಿವೃತ್ತಿಯಾದ ನಂತರ ಹೊಳೆ ನರಸೀಪುರದಲ್ಲಿ ವಾಸ ಇದ್ದರು ಎಂದರೆ ಸರಿ. ಅವರು ಅಲ್ಲೇ ನಿಧನರಾದರು ಎಂದರೆ ಸರಿ. ಮತದಾರರ ಪಟ್ಟಿಯಲ್ಲಿ ನಮ್ಮ ಮತ್ತು ನಮ್ಮ ಕುಟುಂಬದವರ ಹೆಸರುಗಳು ಇದೆ ಎಂದರೆ ಸರಿ. ಸಾಕ್ಷಿಗೆ ಮತದಾರರ ಪಟ್ಟಿ ತೋರಿಸಿ ಸೀರಿಯಲ್ ನಂ. 597 ರಿಂದ 601 ರವರೆಗೆ ಇರುವಂತಹ ಹೆಸರುಗಳು ನನ್ನ, ನನ್ನ ಹೆಂಡತಿ ಮತ್ತು ಮಕ್ಕಳ ಹೆಸರುಗಳು ಎಂದರೆ ಸರಿ. ಸದರಿ ಮತದಾರರ ಪಟ್ಟಿಯನ್ನು **ನಿಡಿ-5** ಎಂದು ಗುರುತಿಸಲಾಯಿತು. ನಿಡಿ-5 ರಲ್ಲಿ ನನ್ನ ತಂದೆಯ ಹೆಸರು ಮೀರ್ ಅಬ್ಬಾಸ್ ಆಲಿ ಎಂದು ಇದೆ. ನನ್ನ ಆಧಾರ ಕಾರ್ಡು, ಮತದಾರರ ಪಟ್ಟಿ, ಸೇವಾ ದಾಖಲೆಗಳಿಗೆ ನನ್ನ ತಂದೆಯ ಹೆಸರು ಮೀರ್ ಅಬ್ಬಾಸ್ ಆಲಿ ಎಂದು ನಾನೇ ನೀಡಿದ್ದೇನೆ ಎಂದರೆ ಸರಿ. ಸಾಕ್ಷಿಗೆ ಮತದಾರರ ಪಟ್ಟಿ ತೋರಿಸಿ ಅದು 1 ನೇ ಪ್ರತಿವಾದಿಯದು ಎಂದರೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಆದುದರಿಂದ ನಿಶಾನೆಗೊಳಿಸಿಲ್ಲ. 1 ನೇ ಪ್ರತಿವಾದಿಯ ತಂದೆಯ ಹೆಸರು ಮೀರ್ ಶೌಕತ್ ಆಲಿ ಎಂದು ನಮೂದಿದೆ ಎಂದರೆ ಸರಿ. 1 ರಿಂದ 5 ನೇ ಪ್ರತಿವಾದಿಗಳ ಶಾಲಾ ದಾಖಲಾತಿಗಳಲ್ಲಿ ಅವರ ತಂದೆಯ ಹೆಸರು ಮೀರ್ ಶೌಕತ್ ಆಲಿ ಎಂದು ಇದೆ ಎಂದರೆ ಗೊತ್ತಿಲ್ಲ. 1 ರಿಂದ 5 ನೇ ಪ್ರತಿವಾದಿಗಳ ತಂದೆ ಮೀರ್ ಶೌಕತ್ ಆಲಿ 1992 ರಲ್ಲಿ ನಿಧನಗೊಂಡರು. ಮೀರ್ ಶೌಕತ್ ಆಲಿಯವರ ವಂಶ ವೃಕ್ಷ ನನ್ನ ಬಳಿ ಇಲ್ಲ. ಸಾಕ್ಷಿಗೆ ವಂಶವೃಕ್ಷದ ಪ್ರಮಾಣ ಪತ್ರ ತೋರಿಸಿ ಮೀರ್ ಶೌಕತ್ ಆಲಿಯವರ ವಂಶವೃಕ್ಷ ಎಂದರೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಆದ್ದರಿಂದ ನಿಶಾನೆಗೊಳಿಸಿಲ್ಲ. ಆ ವಂಶವೃಕ್ಷದಲ್ಲಿ ನನ್ನ ಹೆಸರಿಲ್ಲ ಎಂದರೆ ಸರಿ.

12. ಸುಮಾರು 2006-07 ರಲ್ಲಿ ಮೀರ್ ಶೌಕತ್ ಆಲಿಯವರು ವಿಲ್ ಬರೆದ ಬಗ್ಗೆ ಗೊತ್ತಾಯಿತು. ದಿಃ 22.04.2003 ರಂದು 1 ರಿಂದ 6 ನೇ ಪ್ರತಿವಾದಿಗಳು ಮತ್ತು

ಅವರ ತಾಯಿ ತಾಲಿಯಾ ಬೇಗಂ ರವರಿಗೆ ವಿಲ್ ಮಾಡಿರುವ ಬಗ್ಗೆ ನೋಟೀಸು ನೀಡಿದ್ದೆ ಎಂದರೆ ಗೊತ್ತಿಲ್ಲ. ಸಾಕ್ಷಿಗೆ ನಿಪಿ–10 ನ್ನು ತೋರಿಸಿ ನೀವೇ ತಿಳುವಳಿಕೆ ಪತ್ರ ನೀಡಿರುವುದು ಎಂದರೆ ನಾನು ನೀಡಿಲ್ಲ ಎಂದು ನುಡಿಯುತ್ತಾರೆ.

13. ಮೀರ್ ಅಬ್ಬಾಸ್ ಆಲಿಯವರನ್ನು ಮೀರ್ ಶೌಕತ್ ಆಲಿ ಎಂದು ತೋರಿಸಲು ಯಾವುದಾದರೂ ಸರ್ಕಾರಿ ದಾಖಲೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿಯು ನನ್ನ ತಂದೆ ನನ್ನ ಮದುವೆಯ ರಿಜಿಸ್ಟರ್ ನಲ್ಲಿ ಸಹಿ ಮಾಡಿದ್ದಾರೆ ಎಂದು ನುಡಿಯುತ್ತಾರೆ. 1 ರಿಂದ 5 ನೇ ಪ್ರತಿವಾದಿಗಳ ತಂದೆ ಯಾವ ಹೆಸರಿನಲ್ಲಿ ಸಹಿ ಮಾಡುತ್ತಿದ್ದರು ಎಂದರೆ ಸಾಕ್ಷಿಯು ಒಂದೊಂದು ಬಾರಿ ಮೀರ್ ಅಬ್ಬಾಸ್ ಆಲಿ ಎಂದು ಹಾಗೂ ಒಂದೊಂದು ಬಾರಿ ಮೀರ್ ಶೌಕತ್ ಆಲಿ ಎಂದು ಸಹಿ ಮಾಡುತ್ತಿದ್ದರು ಎಂದು ನುಡಿಯುತ್ತಾರೆ. ಮೀರ್ ಶೌಕತ್ ಆಲಿ ಯವರು ಮೀರ್ ಅಬ್ಬಾಸ್ ಆಲಿ ಎಂದು ಸಹಿ ಮಾಡಿದ ದಾಖಲೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿಯು ನನ್ನ ತಂದೆ ನನ್ನ ಮದುವೆಯಲ್ಲಿ ಮೀರ್ ಶೌಕತ್ ಆಲಿ ಎಂದು ಸಹಿ ಮಾಡಿದ್ದಾರೆ, ಆದರೆ ಮೀರ್ ಅಬ್ಬಾಸ್ ಆಲಿ ಎಂದು ಸಹಿ ಮಾಡಿದ ದಾಖಲೆ ಹಾಜರುಪಡಿಸಿಲ್ಲ ಎಂದು ನುಡಿಯುತ್ತಾರೆ. ಮೀರ್ ಶೌಕತ್ ಆಲಿ ಯವರನ್ನು ಎಂದೂ ಸಹ ಮೀರ್ ಅಬ್ಬಾಸ್ ಆಲಿ ಎಂದು ಕರೆದಿಲ್ಲ, ಆದ್ದರಿಂದ ಅವರು ಎಲ್ಲೂ ಸಹ ಮೀರ್ ಅಬ್ಬಾಸ್ ಆಲಿ ಎಂದು ತೋರಿಸಿಲ್ಲ ಹಾಗೂ ಆ ರೀತಿ ಸಹಿ ಮಾಡಿಲ್ಲ ಎಂದರೆ ಸರಿಯಲ್ಲ.

14. ಮೀರ್ ಶೌಕತ್ ಆಲಿ ಯವರು ಆಂಗ್ಲ ಭಾಷೆಯಲ್ಲಿ ಸಹಿ ಮಾಡುತ್ತಿದ್ದರು. ಸಾಕ್ಷಿಗೆ ಮರಣ ಶಾಸನ ಪತ್ರದ ದಾಖಲೆ ತೋರಿಸಿ ಅದರಲ್ಲಿರುವ ಮೀರ್ ಶೌಕತ್ ಆಲಿ ಯವರ ಸಹಿಯೇ ಎಂದರೆ ಹೌದು ಎಂದು ನುಡಿಯುತ್ತಾರೆ. ಸದರಿ ದಾಖಲೆಯ ಸಹಿಗಳಿಗೆ ಒಳಪಟ್ಟು ಸದರಿ ದಾಖಲೆಯನ್ನು **ನಿಡಿ–6** ಎಂದು ಗುರುತಿಸಲಾಯಿತು. ನಿಡಿ–6 ರ ವಿಲ್ ಅನ್ನು ಮೀರ್ ಶೌಕತ್ ಆಲಿಯವರು ಮಾಡಿರುವುದು, ಆದರೆ ಅದರಲ್ಲಿರುವ ವಿಚಾರ ಗೊತ್ತಿಲ್ಲ. ಅದರಲ್ಲಿ ಏನು ಬರೆದಿದೆ ಎಂದು ಗೊತ್ತಿಲ್ಲ. ದಿಃ

30.01.1992 ರಂದು ಮೀರ್ ಶೌಕತ್ ಆಲಿ ಯವರು ತನ್ನ ಗಂಡು ಮಕ್ಕಳು ಮತ್ತು ಹೆಣ್ಣು ಮಕ್ಕಳಿಗೆ ವಿಲ್ ಬರೆದಿದ್ದಾರೆ ಎಂದರೆ ನನಗೆ ಗೊತ್ತಿಲ್ಲ .

15. 1 ನೇ ಪ್ರತಿವಾದಿ ಮೀರ್ ಅಹಮದ್ ಅಲಿ ಟ್ರಸ್ಟ್ ಅಧ್ಯಕ್ಷರಿಗೆ ದಿಃ 05.05.2011 ರಂದು ನಾನು ಮೋಸದಿಂದ ಮೀರ್ ಶೌಕತ್ ಆಲಿ ಯವರ ಮಗ ಎಂದು ಸುಳ್ಳು ಹೇಳಿ ಟ್ರಸ್ಟ್ ನ ಸದಸ್ಯರಾಗಿದ್ದಾರೆಂದು ನೋಟೀಸು ನೀಡಿದ್ದರು ಎಂದರೆ ನನಗೆ ಗೊತ್ತಿಲ್ಲ. ನಾನು ಆ ಟ್ರಸ್ಟ್ ನ ಕಾರ್ಯದರ್ಶಿ ಯಾಗಿದ್ದರಿಂದ ನನಗೆ ಆ ವಿಚಾರ ಗೊತ್ತಿತ್ತು ಎಂದರೆ ಸರಿಯಲ್ಲ. ಆ ವಿಚಾರ ಗೊತ್ತಿದ್ದರೂ ಗೊತ್ತಿಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

16. ಸ. ನಂ. 159 ರಲ್ಲಿ 3 ಎಕರೆ ಜಮೀನು ಇದೆ. ಸ. ನಂ. 159 ರಲ್ಲಿ 3 ಎಕರೆ 25 ಗುಂಟೆ ಇದ್ದು ಅದರ ಪೈಕಿ 1 ಎಕರೆ 37 ವರೆ ಗುಂಟೆ ಜಮೀನನ್ನು 1 ನೇ ಪರತಿವಾದಿ ಹಾಗೂ 1 ಎಕರೆ 37 ವರೆ ಗುಂಟೆ ಜಮೀನನ್ನು 6 ನೇ ಪ್ರತಿವಾದಿಯ ಗಂಡನಿಗೆ ವಿಲ್ ಮಾಡಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ಸ. ನಂ. 159 ರಲ್ಲಿ 5 ಅಂಕಣದ ಮನೆ ಇದೆ ಎಂದರೆ ಸರಿ. ಸದರಿ ಮನೆಯ ಅರ್ಧ ಭಾಗವನ್ನು 1 ನೇ ಪ್ರತಿವಾದಿಗೆ ಮತ್ತು ಉಳಿಕೆ ಅರ್ಧ ಭಾಗವನ್ನು 6 ನೇ ಪ್ರತಿವಾದಿಯ ಗಂಡನಿಗೆ ವಿಲ್ ಮಾಡಲಾಗಿದೆ ಎಂದರೆ ನನಗೆ ಗೊತ್ತಿಲ್ಲ. 6 ನೇ ಪ್ರತಿವಾದಿಯ ಗಂಡ ತೀರಿಕೊಂಡ ನಂತರ 6 ರಿಂದ 8 ನೇ ಪ್ರತಿವಾದಿಗಳು ಮೀರ್ ನಸರತ್ ಆಲಿ ಯವರಿಗೆ ಬಂದಂತಹ ಸ. ನಂ. 159 ರ ಭಾಗದ ಜಮೀನನ್ನು ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನಾನು 1 ರಿಂದ 5 ನೇ ಪ್ರತಿವಾದಿಗಳ ತಂದೆಯ ಮಗನಲ್ಲ, ಆದ್ದರಿಂದ ನನಗೆ ಯಾವುದೇ ವಿಚಾರ ಗೊತ್ತಿಲ್ಲ ಎಂದರೆ ಸರಿಯಲ್ಲ. ಈ ದಾವೆಯನ್ನು ಹೂಡುವ ಮುನ್ನವೇ ಮೀರ್ ಶೌಕತ್ ಆಲಿಯವರ ವಿಲ್ ಬಗ್ಗೆ ಗೊತ್ತಿದ್ದರೂ ಸಹ ದಾವೆಯಲ್ಲಿ ನಮೂದಿಸಿಲ್ಲ ಎಂದರೆ ಸಾಕ್ಷಿಯು ವಿಲ್ ಬಗ್ಗೆ ಗೊತ್ತಿರಲಿಲ್ಲ, ಆದ್ದರಿಂದ ನಮೂದಿಸಿಲ್ಲ ಎಂದು ನುಡಿಯುತ್ತಾರೆ. ನಿಪಿ–7 ಅನ್ನು ಈ ದಾವೆ ಹೂಡಿದ ನಂತರ ಹಾಜರುಪಡಿಸಿದ ನಂತರ ನಿಪಿ–7 ನ್ನು ಪಡೆದಿರುವುದು ಎಂದರೆ ಸರಿ. ನಿಪಿ–7 ಮತ್ತು 8 ಅನ್ನು ಈ ದಾವೆಗೋಸ್ಕರ ಸೃಷ್ಟಿಸಿದ್ದು ಎಂದರೆ ಸರಿಯಲ್ಲ. ನಿಪಿ–5 ಅನ್ನು ನಮ್ಮ

ಕುಟುಂಬದವರು ದಾನ ಪತ್ರ ಮಾಡಿ ಕೊಟ್ಟಿದ್ದಾರೆ. ನಿಪಿ–6 ರಲ್ಲಿ ಮೋಸದಿಂದ ನನ್ನ ತಂದೆಯ ಹೆಸರನ್ನು ಮೀರ್ ಶೌಕತ್ ಆಲಿ ಎಂದು ತೋರಿಸಿ ಟ್ರಸ್ಟ್‌ಗೆ ಸೇರಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನಿಪಿ–6 ರಲ್ಲಿ ನನ್ನ ತಂದೆಯ ಹೆಸರು ಮೀರ್ ಅಬ್ಬಾಸ್ ಆಲಿ ಎಂದು ಇಲ್ಲ ಎಂದರೆ ಸರಿ. ಈ ದಾವೆ ಹೂಡಲೆಂದು ನಿಪಿ–5 ಮತ್ತು 6 ಅನ್ನು ಸೃಷ್ಟಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನಾನು ಮೀರ್ ಶೌಕತ್ ಆಲಿ ಯವರ ಮಗ ಎಂದು ದಾಖಲೆಗಳನ್ನು ಸೃಷ್ಟಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಆದ್ದರಿಂದ ನಾನು ಯಾವುದೇ ಪರಿಹಾರ ಪಡೆಯಲು ಶಕ್ತನಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**<u>ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು</u>**

**<u>ಓದಿ ಹೇಳಿ ಕೇಳಿ ಸರಿ ಇದೆ ಎಂದು ಸಾಕ್ಷಿ ಒಪ್ಪಿಕೊಂಡಿರುತ್ತಾರೆ.</u>**

**1 ನೇ ಹೆಃಸಿ.ನ್ಯಾ ಹಾಗೂ ಪ್ರ.ದ.ನ್ಯಾದಂ.**
**ಪಿರಿಯಾಪಟ್ಟಣ.**